ಬೆಂಗಳೂರು ನಗರ ಸಭೆಯ ವ್ಯಾಪ್ತಿಯಲ್ಲಿರುವ ಮಂರ್ಫಿ ಟೌನ್‌ನಲ್ಲಿ ಕಟ್ಟಿಸಿದ್ದ ಮನೆಗಳನ್ನು ಅಲ್ಲಿನ ನಿವಾಸಿಗಳಿಗೆ ಕೊಡುವುದು

೨೦೫೬. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ನಗರಾಭಿವೃದ್ಧಿ ಮಂತ್ರಿ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಬೆಂಗಳೂರು ನಗರ ಸಭೆಯವರು ಮಂರ್ಫಿಟೌನ್‌ನಲ್ಲಿ ಕಟ್ಟಿಸಿದ್ದ ಮನೆಗಳಲ್ಲಿ ವಾಸಿಸುತ್ತಿರುವವರಿಗೆ ಕೊಡಬೇಕೆಂದು ಅಲ್ಲಿನ ನಿವಾಸಿಗಳಿಂದ ಮನವಿಯನ್ನು ಸರ್ಕಾರದವರಿಗೆ ನೀಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಸದರಿ ಮನೆಗಳನ್ನು ಅವರಿಗೆ ಕೊಡುವ ಬಗ್ಗೆ ಸರ್ಕಾರದವರು ಈವರೆಗೆ ಕೈಗೊಂಡಿರುವ ಕ್ರಮಗಳೇನು ಹಾಗೂ ಯಾವಾಗ ಮನೆಗಳನ್ನು ಅವರಿಗೆ ಕೊಡಲಾಗುವುದು ?

ಇ) ಮನೆಗಳನ್ನು ಅವರಿಗೆ ಕೊಡಲು ಸರ್ಕಾರದವರು ನಿರಾಕರಿಸಿದಲ್ಲಿ ಅದಕ್ಕೆ ಕಾರಣಗಳೇನು ಹಾಗೂ ಅಲ್ಲಿರುವ ಜನರ ವಾಸದ ಸಮಸ್ಯೆಯನ್ನು ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ, ಮತ್ತು ಲೋಕೋಪಯೋಗಿ ಸಚಿವರು).—

ಅ) ಮಂರ್ಫಿಟೌನ್‌ನಲ್ಲಿರುವ ಮಹಾನಗರ ಪಾಲಿಕೆಯ ವಸತಿ ಗೃಹಗಳನ್ನು ಸ್ವಾಧೀನದಲ್ಲಿರುವವರಿಗೆ ಮಾರಾಟ ಮಾಡಲು ಈಗಾಗಲೇ ಮಹಾನಗರ ಪಾಲಿಕೆಯ ಆಡಳಿತಾಧಿಕಾರಿಗಳವರ ದಿನಾಂಕ ೬-೫-೧೯೭೬ ರಂದು ವಿಷಯದ ಸಂಖ್ಯೆ ೮೬೮ರಲ್ಲಿ ನಡೆದ ನಡವಳಿಕೆಯಲ್ಲಿ ತೀರ್ಮಾನವಾಗಿದ್ದು ಅದಕ್ಕೆ ಸರ್ಕಾರದ ಆಜ್ಞೆಯ ಸಂಖ್ಯೆ : ಹೆಚ್‌ಯುಡಿ ೨೫೧ ಎಂಎನ್‌ಜೆ ೭೨, ದಿನಾಂಕ ೧೮-೫-೧೯೭೮ರಲ್ಲಿ ಮಂಜೂರಾತಿಯಾಗಿರುತ್ತದೆ. ಇವರುಗಳಿಂದ ಮತ್ತೆ ಮನವಿಯನ್ನು ಪಡೆಯುವ ಪ್ರಮೇಯವು ಉದ್ಭವಿಸುವುದಿಲ್ಲ.

ಆ) ಮತ್ತು ಇ) ಮೇಲೆ ತಿಳಿಸಿರುವ ಈ ವಸತಿ ಗೃಹಗಳನ್ನು ಈಗಾಗಲೇ ಮಾರಾಟ ಮಾಡಿರುವುದರಿಂದ ಈ ಸಮಸ್ಯೆ ಈಗ ಉದ್ಭವಿಸುವುದಿಲ್ಲ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಈಗ ತಮಗೆ ಗೊತ್ತಿರುವ ಹಾಗೆ ಈ ಮಂರ್ಫಿ ಟೌನ್‌ನಲ್ಲಿ ಇರತಕ್ಕವರೆಲ್ಲರೂ ಹೆಚ್ಚಾಗಿ ಷೆಡ್ಯೂಲ್ಡ್ ಕಾಸ್ಟ್ ಜನಾಂಗಕ್ಕೆ ಸೇರಿದಂತಹವರು ಅವರಿಗೆ ೭೫ ವರ್ಷಗಳ ಹಿಂದೆ ಬ್ರಿಟಿಷರ ಕಾಲದಲ್ಲಿ ಈ ಕಾಲೋನಿಯನ್ನು ಕಟ್ಟಿಸಿದ ಪ್ರಕರಣ ತಮಗೂ ಗೊತ್ತಿದೆ ಈಗಾಗಲೇ ಈ ಬಗ್ಗೆ ಕಾರ್ಪೊರೇಷನ್ ನವರು ತೀರ್ಮಾನ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ. ಆ ತೀರ್ಮಾನವನ್ನು ತೆಗೆದುಕೊಂಡಿದ್ದರೆ ಅಲ್ಲಿರತಕ್ಕವರಿಗೆ ಫ್ರೀ ಸೇಲ್‌ಡೀಡ್ ಮಾಡಿ ತಕ್ಷಣವೇ ಮಾಡಿಕೊಡುತ್ತೀರೋ ಹೇಗೆ ?

ಶ್ರೀ ಎಂ. ಚಂದ್ರಶೇಖರ್.—ಈಗ ಕೊಟ್ಟಿದ್ದು ಇಷ್ಟು ಮನೆಗಳು ಅಲ್ಲಿ ಳಿಟಿ ಮನೆಗಳನ್ನು ಕಟ್ಟಿದ್ದು ಅದರಲ್ಲಿ ಈ ಕ್ರಮ ತೆಗೆದುಕೊಂಡಿದೆ, ವಾಸ ಮಾಡುತ್ತಿರುವಂಥ ಜನಕ್ಕೇ ಕೊಡಬೇಕು ಎಂದು ೭೨ರಲ್ಲಿ ಇದನ್ನು ಮಾಡಿದೆ. ಇನ್ನೂ ಹೆಚ್ಚುವರಿ ಜನಕ್ಕೆ ಪ್ರತ್ಯೇಕವಾದಂಥ ವ್ಯವಸ್ಥೆ ಮಾಡಬೇಕೆಂದಮೇಲೆ ಈ ಕಾರ್ಯಕ್ರಮವನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮಗೆ ಗೊತ್ತಿದಂತೆ ಬ್ರಿಟಿಷ್ ಸರ್ಕಾರ ಮೈಸೂರಿನ ಗವರ್ನಮೆಂಟ್‌ನಿಂದ ಒಂದೂವರೆ ಲಕ್ಷ ರೂಪಾಯಿ ಪರಿಹಾರ ಕೊಟ್ಟು ಈ ಜಮೀನನ್ನು ವಶಪಡಿಸಿಕೊಂಡು ಪ್ಲೇಗ್ ಆಗಿದೆ ಎಂದು ಇರತಕ್ಕಂಥ ಗುಡಿಸಲುಗಳನ್ನು ಡೆಮಾಲಿಷ್ ಮಾಡಿ ಹೊಸ ಕಾಲೋನಿಯನ್ನು ನಿರ್ಮಾಣ ಮಾಡಿದರು. ಇದೇ ನ್ಯೂ ಕಾಲೋನಿಯಲ್ಲಿರತಕ್ಕಂಥ ೫೦ ಪರ್ಸೆಂಟ್ ಜನರಿಗೆ ಮನೆಗಳು ಇಲ್ಲ. ಅದಕ್ಕೆ ಒಬ್ಬರಿಗೆ ಸಿಕ್ಕಮೇಲೆ ಇನ್ನೊಬ್ಬರು ಬೇರೆ ಕಡೆಗೆ ಹೋಗಲಿಕ್ಕೆ ಅವಕಾಶ ಇಲ್ಲ. ಆದ್ದರಿಂದ ಅವರಿಗೆ ಮಂಲ್ಟಿಸ್ಟೋರೀಡ್ ಅಥವಾ ಇನ್ನಾವುದೇ ರೀತಿಯಲ್ಲಿ ವಾಸ್ತವ್ಯದ ವ್ಯವಸ್ಥೆ ಮಾಡುತ್ತೀರಾ ಹೇಗೆ ?

ಶ್ರೀ ಎಂ. ಚಂದ್ರಶೇಖರ್.—ಇದನ್ನು ಪರಿಶೀಲನೆ ಮಾಡಬೇಕೆಂದ ನಾನು ನಗರಪಾಲಿಕೆಗೆ ತಿಳಿಸುತ್ತೇನೆ.